# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ.102/2025**

ಫಿರ್ಯಾದಿ : ಸರ್ಕಾರ : ಸೆನ್ ಅಪರಾದ ಪೋಲಿಸ ಠಾಣೆ,
ಕಾರವಾರ, ಉ.ಕ.

ವಿರುದ್ಧ

1 ನೇ ಆರೋಪಿ : ಸಾಹೀಲ್ ನಾರಾಯಣ ತಾಂಡೇಲ್ ,
@ ಸಾಹೀಲ್ ನಾರಾಯಣ ತಾಂಡೇಲ್ ,
ವಯಸ್ಸು: 19 ವರ್ಷ,
ವೃತ್ತಿ : ಕೂಲಿ ,
ಸಾ : ಸೀ-ಬರ್ಡ್ ಕಾಲೋನಿ, ಚಿತ್ತಾಕುಲ,
ಕಾರವಾರ.

**ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ.351 ರ ಅಡಿ ಆರೋಪಿತರ ಹೇಳಿಕೆ**

ಪ್ರಶ್ನೆ: 1: ನ್ಯಾಯಾಲಯದ ಸಮಕ್ಷಮ ಸಾಕ್ಷಿ ನುಡಿದಿರುವುದನ್ನು ಕೇಳಿಸಿಕೊಂಡಿರುವಿರಾ ?

ಉತ್ತರಃ

ಪ್ರಶ್ನೆ: 2: **ಫ್ರಾಸಾ-1 ಸುದರ್ಶನ ನಾಯ್ಕ** ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17-08-2024 ರಂದು ಸಾಯಂಕಾಲ 6.15 ಗಂಟೆಗೆ ತಾನು ಠಾಣೆಯ ಕರ್ತವ್ಯದಲ್ಲಿದ್ದಾಗ ಚಾ.ಸಾ.1 ರವರು ತನ್ನನ್ನು, ಚಾ.ಸಾ. 5 ರಿಂದ 8 ಇವರನ್ನು ಕರೆದು ಕಾರವಾರ ನಗರದ ಬಿಲ್ಟ ಸರ್ಕಲ್ ಮೇಲು ಸೇತುವೆ ರಸ್ತೆ ಕೆಳಗೆ 3 ಜನ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿದ್ದು ನಾವೆಲ್ಲಾ ಅವರೊಂದಿಗೆ ದಾಳಿ ಮಾಡಲು ಸಹಕರಿಸಲು ಕೇಳಿದ್ದು, ತಮ್ಮ ಠಾಣೆಯಿಂದ 5.20 ಗಂಟೆಗೆ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಸೇಂಟ್ ಮೈಕಲ್ ಶಾಲೆಯ ಹತ್ತಿರ ಹೋಗಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ: 3: **ಫ್ರಾಸಾ-1** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಚಾ.ಸಾ.2 ಮತ್ತು ಚಾ.ಸಾ.3 ರವರನ್ನು ಚಾ.ಸಾ.8 ರವರು ಕರೆದುಕೊಂಡು ಬಂದಿದ್ದು, ನಾವೆಲ್ಲರೂ ಸೇರಿ ಕಾಲ್ನಡಿಗೆಯಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಹೋಗಿ ದಾಳಿ ಮಾಡಲಾಗಿದ್ದು, ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದ ಮೇಲೆ ಕುಳಿತಿದ್ದು ಇಬ್ಬರು ವ್ಯಕ್ತಿಗಳು ಪಕ್ಕದಲ್ಲಿ ಇದ್ದು, ಇಬ್ಬರು ವ್ಯಕ್ತಿಗಳು ತಮ್ಮನ್ನು ನೋಡಿ ಓಡಿ ಹೋಗಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 4: **ಪ್ರಾಸಾ–1** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಎಲ್ಲರೂ ಸೇರಿ ಹಿಡಿದುಕೊಂಡಿದ್ದು, ಅಲ್ಲಿಗೆ ಪತ್ರಾಂಕಿತ ಅಧಿಕಾರಿಯವರ ಅವಶ್ಯಕತೆ ಇದ್ದುದರಿಂದ ಚಾ.ಸಾ.11 ಇವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಆರೋಪಿಯ ಕೈಯಲ್ಲಿ ಇದ್ದಂತಹ ಪ್ಲಾಸ್ಟಿಕ್ ಕವರನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ಒಣಗಿದ ಹೂವು, ಬೀಜ, ಎಲೆಗಳುಳ್ಳ ಗಾಂಜಾ ಘಾಟು ವಾಸನೆ ಇರುವ ಪದಾರ್ಥದಿಂದ ಕಂಡುಬಂದಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 5: **ಪ್ರಾಸಾ–1** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಅದನ್ನು ಗಾಂಜಾ ಪದಾರ್ಥ ಎಂದು ಖಚಿತಪಡಿಸಿಕೊಂಡು ಅದನ್ನು ಎಲ್ಲಿಂದ ತಂದಿರುವುದಾಗಿ ಕೇಳಿದ್ದು ಸದರಿಯವರು ತಾವು ಮೂರೂ ಜನ ಸೇರಿ ಗೋವಾದಿಂದ ತಂದು ಇಲ್ಲಿ ಮಾರಾಟ ಮಾಡುವುದಾಗಿ ಹೇಳಿದ್ದು, ಆತನ ಹೆಸರು ಕೇಳಲಾಗಿ ಸಾಯಿ ತಾಂಡೇಲ್ ಎಂದು ಹೇಳಿದ್ದು, ಓಡಿ ಹೋದವರ ಹೆಸರಿನಲ್ಲಿ ಒಬ್ಬ ಪ್ರಜ್ವಲ್ ವಾಲ್ಮೀಕಿ, ಇನ್ನೊಬ್ಬರ ಹೆಸರು ಅರ್ಶನ್ ಗೌಸಖಾನ್ ಎಂದು ತಿಳಿಸಿರುವುದಾಗಿ, ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 6: **ಪ್ರಾಸಾ–1** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಅವುಗಳನ್ನು ವಶಕ್ಕೆ ಪಡೆದು ತೂಕ ಮಾಡಲಾಗಿ 411 ಗ್ರಾಮ್ ಇರುವುದು ಕಂಡುಬಂದಿದ್ದು, ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ ಪಂಚನಾಮಾ ಕ್ರಮ ಜರುಗಿಸಿ ರಾಸಾಯನಿಕ ಪರೀಕ್ಷೆಗಾಗಿ ಗಾಂಜಾವನ್ನು ತೆಗೆದಿರಿಸಿ ಅಮಾನತ್ತುಪಡಿಸಿಕೊಂಡಿದ್ದು, ಸ್ಥಳದಲ್ಲಿ ಭಾವಚಿತ್ರ ತೆಗೆದು, ಆರೋಪಿಯ ಬಳಿ ಕಿಸೆಯ ಜೇಬಿನಲ್ಲಿ ಒಂದು ಮೊಬೈಲ್ ಫೋನ್ ಇದ್ದು ಅದನ್ನೂ ಸಹ ಪಂಚನಾಮೆ ಕಾಲಕ್ಕೆ ಅಮಾನತ್ತುಪಡಿಸಿಕೊಂಡಿದ್ದು, ಆತನ ಬಳಿ ಇದ್ದ ದ್ವಿಚಕ್ರ ವಾಹನ ಪರಿಶೀಲಿಸಲಾಗಿ ಕೆಎ–30–ಎಕ್ಸ–0125 ಆಗಿತ್ತು. ಅದನ್ನು ವಶಕ್ಕೆ ಪಡೆದುಕೊಂಡಿದ್ದು, ನಂತರ ಆರೋಪಿಯೊಂದಿಗೆ ಮುದ್ದೆಮಾಲುಗಳನ್ನು ತೆಗೆದುಕೊಂಡು ಠಾಣೆಗೆ ಹೋಗಿದ್ದು, ಪಂಚನಾಮೆಯನ್ನು ಲ್ಯಾಪಟಾಪ್‌ನಲ್ಲಿ ತಯಾರಿಸಿ ಸ್ಥಳದಲ್ಲಿಯೇ ಪ್ರಿಂಟ್ ತೆಗೆದಿದ್ದು, ಪಂಚನಾಮೆಯನ್ನು ತಾನೇ ಬೆರಳಚ್ಚು ಮಾಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 7: **ಪ್ರಾಸಾ–5 ರೂಪಾ ಬಾಡಕರ** ಇವರು ತಮ್ಮ ಸಾಕ್ಷದಲ್ಲಿ ದಿನಾಂಕ 17–08–2024 ರಂದು ತಾನು 6.45 ಗಂಟೆಗೆ ಕಚೇರಿಯಲ್ಲಿದ್ದಾಗ ಕಾರವಾರದ ಸೆನ್ ಪೊಲೀಸರು ಬಂದು ಗಾಂಜಾ ಹಿಡಿದಿದ್ದು, ಪತ್ರಾಂಕಿತ ಅಧಿಕಾರಿ ಬರಬೇಕು ಎಂದು ಹೇಳಿದ್ದು, ಕಾರವಾರದ ಸೇಂಟ್ ಮೈಕಲ್ ಶಾಲೆಯ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದು ತಿಳಿಸಿರುವುದಾಗಿ, ನಾವು ಸ್ಥಳಕ್ಕೆ ಹೋದಾಗ

ಒಬ್ಬ ವ್ಯಕ್ತಿಯನ್ನು ಹಿಡಿದುಕೊಂಡಿದ್ದು ಆತನ ಹೆಸರು ಸಾಹಿಲ್ ತಾಂಡೇಲ್ ಎಂದು ಗೊತ್ತಾಗಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 8: ಪ್ರಾಸಾ-5 ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಆರೋಪಿ ಮತ್ತು ಸ್ಥಳದಲ್ಲಿ ಸ್ಕೂಟರ ಇದ್ದು ಬೇರೆ ಯಾರು ಇರಲಿಲ್ಲ, ಸ್ಕೂಟರ ಯಾರದ್ದು ಎಂದು ಕೇಳಿದಾಗ ತನ್ನ ಜೊತೆ ಇಬ್ಬರು ಇದ್ದರು, ಅವರಲ್ಲಿ ಒಬ್ಬರು ಎಂದು ಆರೋಪಿ ಹೇಳಿದ್ದು, ಆರೋಪಿ ತನ್ನ ಬಳಿ ಗಾಂಜಾ ಇದೆ ಎಂದು ಒಪ್ಪಿಕೊಂಡಿದ್ದು ಮತ್ತು ಅದನ್ನು ತಾನು ಮಾರಾಟ ಮಾಡಲು ತಂದಿದ್ದು ಎಂದು ಹೇಳಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 9: **ಪ್ರಾಸಾ-5** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಪೋಲಿಸರು ಅಂಗ ಶೋಧನೆ ಮಾಡಿಸಿ ಅವರ ಬಳಿ ಯಾವುದೇ ಮಾರಾಟ ವಸ್ತು ಇಲ್ಲ ಎಂದು ಖಚಿತ ಪಡಿಸಿಕೊಂಡು ಆರೋಪಿಯ ಅಂಗ ಶೋಧನೆ ಮಾಡಲಾಗಿ ಆತನ ಬಳಿ ಒಂದು ಪ್ಲಾಸ್ಟಿಕ್ ಕವರ ಇದ್ದುದ್ದಾಗಿ ಅದನ್ನು ಪರಿಶೀಲನೆ ಮಾಡಿದಾಗ ಅದು ಘಾಟು ವಾಸನೆವುಳ್ಳ ಒಣಗಿದ ಮೊಗ್ಗು, ಬೀಜ ಮತ್ತು ಎಲೆಗಳು ಇರುವ ಗಾಂಜಾ ಇರುವುದು ಗೊತ್ತಾಗಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 10: **ಪ್ರಾಸಾ-5** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಅದು ಗಾಂಜಾ ಎಂದು ಖಚಿತ ಪಡಿಸಿಕೊಂಡ ನಂತರ ಪೋಲಿಸರು ಅದನ್ನು ತೂಕ ಮಾಡಿದ್ದಾಗಿ, ಅದು 411 ಗ್ರಾಂ ಇದ್ದು, ನಂತರ ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿರುವುದಾಗಿ, ನಂತರ ಅದನ್ನು ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿದ್ದು, ಪೋಲಿಸರು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದು, ಸ್ಥಳದಲ್ಲಿ ಭಾವ ಚಿತ್ರ ತೆಗೆದು ಪಂಚನಾಮೆಗೆ ತನ್ನ ಸಹಿ ತೆಗೆದುಕೊಂಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 11: **ಪ್ರಾಸಾ-6 ರೂಪಾ ಶೇಖ್** ಇವರು ತಮ್ಮ ಸಾಕ್ಷದಲ್ಲಿ ತನ್ನ ಹೆಸರಿನಲ್ಲಿ ತನ್ನ ಮಾಲೀಕತ್ವದ ಜುಪಿಟರ್ ನಂ. ಕೆಎ30-0125 ಇದ್ದು, ಸದರಿ ವಾಹನವನ್ನು ತಾನೇ ಚಾಲನೆ ಮಾಡುತ್ತಿದ್ದು, ತನಗೆ ಆರ್ಥಿಕ ತೊಂದರೆ ಇದ್ದುದರಿಂದ ಅದನ್ನು 3 ನೇ ಆರೋಪಿಗೆ ರೂ.30,000/-ಗೆ ದಿನಾಂಕ 26-08-2024 ರಂದು ಮಾರಾಟ ಮಾಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 12: **ಪ್ರಾಸಾ-6** ತಮ್ಮ ಸಾಕ್ಷದಲ್ಲಿ ಮುಂದುವರೆದು ಆ ಸಮಯದಲ್ಲಿ ಸದರಿ ವಾಹನ ತನ್ನ ಹೆಸರಿನಲ್ಲಿ ಇದ್ದು, ನಂತರ ಸೆನ್ ಪೋಲಿಸ್ ಠಾಣೆಯಿಂದ ಪೋನ್ ಬಂದಿದ್ದು ಸದರಿ

ವಾಹನವನ್ನು ಗಾಂಜಾ ಕೇಸಿನಲ್ಲಿ ಆರೋಪಿತರು ಉಪಯೋಗ ಮಾಡಿದ್ದಾರೆ ಎಂದು ತಿಳಿಸಿರುವುದಾಗಿ, ಪೋಲಿಸರು ತನ್ನನ್ನು ವಿಚಾರಣೆ ಮಾಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 13: **ಫಿರ್ಯಾಸಾ–7 ಗಜಾನನ ನಾಯ್ಡು** ಇವರು ತಮ್ಮ ಸಾಕ್ಷದಲ್ಲಿ ದಿನಾಂಕಃ 17–08–2024 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ–1 ರವರು ಸಂಜೆ 7–45 ಗಂಟೆಗೆ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ಪ್ರಥಮ ವರ್ತಮಾನ ಹೇಳಿಕೆ, ಮುದ್ದೆಮಾಲುಗಳನ್ನು ಮತ್ತು ಆರೋಪಿಯನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು, ತಮ್ಮ ಠಾಣೆಯ ಗುನ್ನಾ ನಂ. 21/2024 ರಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 14: **ಫ್ರಾಸಾ–7** ತಮ್ಮ ಸಾಕ್ಷದಲ್ಲಿ ಮುಂದುವರೆದು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿದ್ದು, ಅಮಾನತ್ತು ಪಡಿಸಿಕೊಂಡಂತಹ ಮುದ್ದೆ ಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿದ್ದು, ಮುಂದಿನ ತನಿಖೆಯನ್ನು ಚಾಸಾ–19 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 15: **ಫ್ರಾಸಾ–8 ಮಂಜೇಶ್ವರ ಚಂದಾವರ** ಇವರು ತಮ್ಮ ಸಾಕ್ಷದಲ್ಲಿ ದಿನಾಂಕಃ 17–08–2024 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ–19 ರಿಂದ ವಹಿಸಿಕೊಂಡಿದ್ದು, ಕಡತವನ್ನು ಪರಿಶೀಲನೆ ಮಾಡಿದ್ದು, ದಾಳಿ ಸಮಯದಲ್ಲಿ ವಿಡಿಯೋಗ್ರಾಫಿ ಮಾಡಿದನ್ನು ಚಾಸಾ–15 ರವರ ಮುಖಾಂತರ ತನ್ನ ಮುಂದೆ ಹಾಜರು ಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಹ್ಯಾಸಿಂಗ ಪಂಚನಾಮೆ ಮಾಡಿ ತನ್ನ ವಶಕ್ಕೆ ಪಡೆದುಕೊಂಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 16: **ಫ್ರಾಸಾ–8** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ದಿನಾಂಕ 18–08–2024 ರಂದು ಚಾಸಾ 9 ರಿಂದ ಚಾಸಾ 11 ರವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದೇ ದಿನ ನ್ಯಾಯಾಲಯದ ಮುಂದೆ ವಶಪಡಿಸಿಕೊಂಡ ಸ್ವತ್ತನ್ನು ಹಾಜರು ಪಡಿಸಿ ಇನವೆಂಟರಿ ಮಾಡಿಸಿಕೊಂಡಿದ್ದು, ದಿನಾಂಕ 21–11–2024 ರಂದು ಜಪ್ತು ಪಡಿಸಿಕೊಂಡ ದ್ವಿಚಕ್ರ ವಾಹನ ಸಂಖ್ಯೆ ಕೆಎ30/ಎಕ್ಸ–0125 ಪಂಚರ ಸಮಕ್ಷಮ ಮಹಜರ ಮಾಡಿ ಅಮಾನತ್ತು ಪಡಿಸಿಕೊಂಡಿದ್ದು, ಆರೋಪಿತನಾದ ನಿಮ್ಮ ವಿರುದ್ಧ

ಸಾಕಷ್ಟು ಸಾಕ್ಷಾದಾರಗಳು ಕಂಡು ಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 17: **ಫ್ರಾಸಾ–9 ಬಿ. ಅಶ್ವಿನಿ** ಇವರು ತಮ್ಮ ಸಾಕ್ಷದಲ್ಲಿ ದಿನಾಂಕಃ 17–08–2024 ರಂದು ಸಾಯಂಕಾಲ 6.15 ಗಂಟೆಗೆ ತಾನು ಠಾಣೆಯ ಕರ್ತವ್ಯದಲ್ಲಿದ್ದಾಗ ತನಗೆ ಬಾತ್ಮಿದಾರರು ಕಾರವಾರ ನಗರದ ಬಿಲ್ಟ ಸರ್ಕಲ್ ಮೇಲು ಸೇತುವೆ ರಸ್ತೆ ಕೆಳಗೆ 3 ಜನ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿದ್ದು ಅದನ್ನು ಸ್ವೀಕರಿಸಿ ಮೇಲಾಧಿಕಾರಿಗಳಿಗೆ ವಿಷಯವನ್ನು ತಿಳಿಸಿದ್ದು, ಅವರಿಂದ ಲಿಖಿತವಾಗಿ ದಾಳಿಗೆ ಅನುಮತಿ ಪಡೆದುಕೊಂಡಿದ್ದು, ದಾಳಿಯ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಗಳ ಹಾಜರಾತಿಗಾಗಿ ಅವರಿಗೆ ಕೋರಿ ಪತ್ರ ಬರೆದಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 18: **ಫ್ರಾಸಾ–9** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಚಾಸಾ–11 ರವರನ್ನು ಬರಮಾಡಿಕೊಂಡು ತಮ್ಮ ಸಿಬ್ಬಂದಿ ಹಾಗೂ ಪತ್ರಾಂಕಿತ ಅಧಿಕಾರಿ ಸೇರಿ 6.25 ಗಂಟೆಗೆ ತಮ್ಮ ಇಲಾಖಾ ವಾಹನದಲ್ಲಿ ಠಾಣೆಯನ್ನು ಬಿಟ್ಟು ಮಾರ್ಗ ಮಧ್ಯದಲ್ಲಿ ಚಾಸಾ 2 ಮತ್ತು 3 ಇವರನ್ನು ಬರಮಾಡಿಕೊಂಡು ವಿಷಯವನ್ನು ತಿಳಿಸಿ ದಾಳಿ ಮಾಡಲು ಸಹಕರಿಸಲು ಕೇಳಿದ್ದು ಅವರು ಒಪ್ಪಿಕೊಂಡಿದ್ದು, ನಂತರ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಮೂರು ಜನ ಆರೋಪಿತರು ಗಾಂಜಾವನ್ನು ಮಾರಾಟ ಮಾಡುತ್ತಿದ್ದು, ಅವರ ಮೇಲೆ ದಾಳಿ ಮಾಡಿ 3 ಜನರನ್ನು ಹಿಡಿದುಕೊಂಡಿದ್ದು, ಅವರನ್ನು ವಿಚಾರಿಸಲಾಗಿ 1 ನೇ ಆರೋಪಿಯ ಹೆಸರು ಸಾಹಿಲ್ ತಾಂಡೇಲ್, ಕಾರವಾರ, 2 ನೇ ಆರೋಪಿ ಪ್ರಜ್ವಲ್ ಬಿಣಗಾ ಗ್ರಾಮ, 3 ನೇ ಆರೋಪಿ ಅರ್ಶನ್ ಗವಸ್ಕರ ಚಿತ್ತಾಕುಲಾ ಎಂದು ಹೇಳಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 19: **ಫ್ರಾಸಾ–9** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ನಂತರ 1 ನೇ ಆರೋಪಿಯ ಕೈಯಲ್ಲಿ ಇದ್ದಂತಹ ಪ್ಲಾಸ್ಟಿಕ್ ಕವರನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ಒಣಗಿದ ಹೂವು, ಬೀಜ, ಎಲೆಗಳುಳ್ಳ ಗಾಂಜಾ ಘಾಟು ವಾಸನೆ ಇರುವ ಪದಾರ್ಥ ಎಂದು ಕಂಡುಬಂದಿದ್ದು, ಅದನ್ನು ಗಾಂಜಾ ಪದಾರ್ಥ ಎಂದು ಖಚಿತಪಡಿಸಿಕೊಂಡು ಅದನ್ನು ಎಲ್ಲಿಂದ ತಂದಿರುವುದಾಗಿ ಕೇಳಿದ್ದು ಸದರಿಯವರು ತಾವು ಮೂರೂ ಜನ ಸೇರಿ ಗೋವಾದಿಂದ ತಂದು ಇಲ್ಲಿ ಮಾರಾಟ ಮಾಡುವುದಾಗಿ ಹೇಳಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 20: **ಫ್ರಾಸಾ–9** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಚಾಸಾ–11 ರ ಸಮಕ್ಷಮದಲ್ಲಿ ಪಂಚನಾಮೆಯನ್ನು ಜರುಗಿಸಿ ಅವುಗಳನ್ನು ವಶಕ್ಕೆ ಪಡೆದು ತೂಕ ಮಾಡಲಾಗಿ 411

ಗ್ರಾಮ್ ಇದ್ದುದು ಕಂಡುಬಂದಿದ್ದು, ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ ಪಂಚನಾಮಾ ಕ್ರಮ ಜರುಗಿಸಿ ರಾಸಾಯನಿಕ ಪರೀಕ್ಷೆಗಾಗಿ ಗಾಂಜಾವನ್ನು ತೆಗೆದಿರಿಸಿ ಅಮಾನತ್ತುಪಡಿಸಿಕೊಂಡಿದ್ದು, ಸ್ಥಳದಲ್ಲಿ ಭಾವಚಿತ್ರ ತೆಗೆದಿದ್ದು, 1 ನೇ ಆರೋಪಿಯನ್ನು ಚಾಸಾ 11ರ ಸಮಕ್ಷಮದಲ್ಲಿ ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟ್ ಜೇಬಿನಲ್ಲಿ ಒಂದು ಮೊಬೈಲ್ ಫೋನ್ ಇದ್ದು ಅದನ್ನೂ ಸಹ ಪಂಚನಾಮೆ ಕಾಲಕ್ಕೆ ಅಮಾನತ್ತು ಪಡಿಸಿಕೊಂಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 21: **ಫ್ರಾಸಾ-9** ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಆತನ ಬಳಿ ಇದ್ದ ದ್ವಿಚಕ್ರ ವಾಹನ ಪರಿಶೀಲಿಸಲಾಗಿ ಕೆಎ-30-ಎಕ್ಸ-0125 ಆಗಿದ್ದು, ಅದನ್ನು ವಶಕ್ಕೆ ಪಡೆದುಕೊಂಡಿದ್ದು, ನಂತರ ಆರೋಪಿಯೊಂದಿಗೆ ಮುದ್ದೆಮಾಲುಗಳನ್ನು ತೆಗೆದುಕೊಂಡು ಠಾಣೆಗೆ ಬಂದಿದ್ದು, ಆರೋಪಿಯ ವಿರುದ್ಧ ಸರ್ಕಾರದ ಪರವಾಗಿ ಪ್ರಥಮ ವರ್ತಮಾನ ಹೇಳಿಕೆ ನೀಡಿರುವುದಾಗಿ ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 22: ನೀವು ಏನಾದರೂ ಹೇಳುವೀರಾ?

ಉತ್ತರಃ

ಪ್ರಶ್ನೆ 23: ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

(ಆರೋಪಿತರಿಗೆ ಕನ್ನಡ ಭಾಷೆಯಲ್ಲಿನ ಮೇಲಿನ ಪ್ರಶ್ನೆಗಳನ್ನು ಕೇಳಲಾಗಿ ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ)

ಕಾರವಾರ

ದಿನಾಂಕಃ 05-08-2026

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಕಾರವಾರ.